ಓ ಎಸ್ ನಂಃ 278-19
ಪಿ ಡಬ್ಲ್ಯೂ ಃ 2

ದಿಃ 06-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್ ಕೆ ಎನ್ ವಕೀಲರಿಂದ

9. ನಾನು ವಾದಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ನನ್ನ ಬಳಿ ಕಂಪನಿಯ ಗುರುತಿನ ಚೀಟಿ ಇರುತ್ತದೆ. ಈಗಲೂ ಸಹ ನಾನು ಅವರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ವಾದಿಗೆ ಸಹಾಯ ಮಾಡಲು ನಾನು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ಹೇಳಲು ಬರುವಂತೆ ವಾದಿ ಕರೆದಿರುತ್ತಾರೆ ಎಂದರೆ ನಿಜ. ನನಗೆ ಶೋಭರವರು ಸಹ ಸಾಕ್ಷಿ ಹೇಳಲು ಕರೆದಿರುತ್ತಾರೆ ಎಂದರೆ ಸರಿಯಲ್ಲ. ಕುಮಾರ್ ರವರನ್ನು ದಾವಾ ಆಸ್ತಿಯ ಖರೀದಿಯ ವಿಷಯವಾಗಿ ನಾನು ಭೇಟಿಯಾಗಿರುವುದಿಲ್ಲ. ವಾದಿ ಪ್ರತಿವಾದಿಗಳ ಕಡೆಯಿಂದ ಜಿ ಪಿ ಎ ಯನ್ನು ಮಾಗಡಿ ತಾಲ್ಲೂಕು ಕಛೇರಿಯಲ್ಲಿ ಪಡೆದಿರುತ್ತಾರೆ. ಜಿ ಪಿ ಎ ಗೆ ಸಹಿಯನ್ನು ಮಾಗಡಿ ತಾಲ್ಲೂಕು ಕಛೇರಿಯ ಮುಂದುಗಡೆ ಮಾಡಲಾಯಿತು. ಜಿ ಪಿ ಎಯನ್ನು ವಾದಿ ಪಡೆದ ದಿನ ಬೇರೆ ಏನು ಮಾಡಲಾಗಿತ್ತು ಗೊತ್ತಿಲ್ಲ. ವಾದಿ ಪ್ರತಿವಾದಿಗಳಿಗೆ ಯಾವ ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತಾರೆ ಗೊತ್ತಿಲ್ಲ. ನಾನು ವಾದಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಜಿ ಪಿ ಎ ಹಾಗೂ ಕ್ರಯದ ಕರಾರು ಪತ್ರ ಆಗಿದ್ದು ಆ ಎರಡು ದಾಖಲೆಗಳಿಗೂ ನಾನು ಸಹಿ ಮಾಡಿಲ್ಲ. ನಾನು ವಾದಿಯ ಹೆಸರಿಗೆ ಆದ ಬೇರೆ ಯಾವುದೇ ಕ್ರಯದ ಕರಾರು ಪತ್ರಗಳಿಗೆ ಸಹಿ ಮಾಡಿಲ್ಲ, ಸಾಕ್ಷಿ ಮುಂದುವರೆದು ಈ ದಾವಾ ಆಸ್ತಿಗೆ ಸಂಬಂದಿಸಿದಂತೆ ಆದ ಕ್ರಯದ ಕರಾರು ಪತ್ರಗಳಿಗೆ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ವಾದಿ ಹಾಗೂ ಪ್ರತಿವಾದಿಗಳ ಮದ್ಯೆ ಬೇರೆ ಯಾವ ಮಾತುಕತೆಯಾಗಿರುತ್ತದೆ ಮತ್ತು ಏನು ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಬೇರೆ ಮಾತುಕತೆಯಾಗಿಲ್ಲ ಎಂದು ಹೇಳುತ್ತಾರೆ. ನನ್ನ ಸಮಕ್ಷಮ ವಾದಿ ಪ್ರತಿವಾದಿಗಳಿಗೆ ತಾಲ್ಲೂಕು ಕಛೇರಿಯಲ್ಲಿ 6 ಲಕ್ಷ 50 ಸಾವಿರ ರೂ ಹಣ ಕೊಟ್ಟಿದ್ದನ್ನು ಹೊರತುಪಡಿಸಿ ನನ್ನ ಸಮಕ್ಷಮ ಪ್ರತಿವಾದಿಗಳಿಗೆ ಬೇರೆ ಹಣ ಕೊಟ್ಟಿಲ್ಲ. ನಿಪಿ 1ನ್ನು ನಾನು ಓದಿರುತ್ತೇನೆ. ದಾವಾ ಆಸ್ತಿಯನ್ನು ಮಾರಾಟ ಮಾಡುವವರು ನನಗೆ ಪರಿಚಯ ಇರದೇ ಇದ್ದಿದ್ದರಿಂದ ನಾನು ನಿಪಿ1ಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಿಪಿ1 ಆಗುವಾಗ ನಾನು ಇರಲಿಲ್ಲ ಆದ ಕಾರಣ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ1 ಆಗುವಾಗ ಕುಮಾರ್ ರವರು ಇದ್ದರು ಅವರನ್ನು ಸಾಕ್ಷಿದಾರರನ್ನಾಗಿ ಸಹಿ ಮಾಡಿಸಬಹುದಾಗಿತ್ತು ಎಂದರೆ ಆ ದಿನ ಅವರು ಇರಲಿಲ್ಲ ಎಂದು ಹೇಳುತ್ತಾರೆ. ನಿಪಿ1ಕ್ಕೆ ಕೆಂಪಣ್ಣ

ಹಾಗೂ ಮಹದೇವರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿಯವರು ನಿಪಿ1 ಹಾಗೂ ಮುಕ್ತರುನಾಮೆಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಾನು ಮಾಗಡಿ ನ್ಯಾಯಾಲಯಕ್ಕೆ ಬಂದಾಗಲೆಲ್ಲ ದಾವಾ ಆಸ್ತಿಯ ಕಡೆ ಹೋಗಿ ಬರುತ್ತೇನೆ. ದಾವಾ ಆಸ್ತಿಯಲ್ಲಿ ಯಾರು ಸಹ ಸ್ವಾಧೀನತೆಯನ್ನು ಹೊಂದಿರುವುದಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಕಂಪನಿಯಿಂದ ಕೆಲಸ ಬಿಟ್ಟಿದ್ದು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಲು ನನ್ನನ್ನು ಕರೆಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನತೆಯನ್ನು ಪ್ರತಿವಾದಿಗಳು ಹೊಂದಿದ್ದು ವಾದಿ ಹೊಂದಿಲ್ಲ ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾದಿ ಯಾವುದೇ ಉಸ್ತುವಾರಿ ಕೊಟ್ಟಿರುವುದಿಲ್ಲ ಎಂದರೆ 2018 ರವರೆಗೆ ನಾನು ವಾದಿಯ ಉಸ್ತುವಾರಿಯವಾಗಿ ಕೆಲಸ ಮಾಡಿದ್ದು ಈಗ ಮಾಡುತ್ತಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ15 ರ ಬಗ್ಗೆ ನನಗೆ ಏನು ಗೊತ್ತಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**

ಓ ಎಸ್ ನಂಃ 278-19
ಪಿ ಡಬ್ಲ್ಯೂ ಃ 3

ದಿಃ 06-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್ ಕೆ ಎನ್ ವಕೀಲರಿಂದ

4. ನಾನು ಬಲರಾಮ್ ಕಾರ್ಪೋರೇಟ್ ಸರ್ವಿಸಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆ ಇದೆ. ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ವಾದಿಯ ಕಂಪನಿ ಸೆಕ್ಯೂರಿಟಿ ಸರ್ವಿಸಸ್ ಆಗಿದ್ದು ಒಟ್ಟು ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಗೊತ್ತಿಲ್ಲ. ನಾನು ವಾದಿಯ ಮ್ಯಾನೇಜರ್ ಮತ್ತು ಆಪ್ತ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ಒಬ್ಬ ಆಪ್ತ ಸಹಾಯಕನಿಗೆ ಕಂಪನಿಯ ಎಲ್ಲಾ ವಿಷಯಗಳು ಗೊತ್ತಿರುತ್ತದೆ ಎಂದರೆ ನಿಜ, ಆದರೆ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆಂದು ಆಯಾ ಫೀಲ್ಡ್ ಆಫೀಸರ್ ಗಳಿಗೆ ಗೊತ್ತಿದ್ದು ಎಷ್ಟು ಜನ ಫೀಲ್ಡ್ ಆಫೀಸರ್ ಗಳು ಇದ್ದಾರೆ ನಾನು ಹೇಳಬಹುದು ಎಂದು ಹೇಳುತ್ತಾರೆ. ಒಬ್ಬ ಆಪ್ತ ಸಹಾಯಕನಿಗೆ ಕಂಪನಿಯ ಎಲ್ಲಾ ವಿಷಯಗಳು ಗೊತ್ತಾಗಬೇಕಾಗುತ್ತದೆ ನನಗೆ ಎಲ್ಲಾ ವಿಷಯಗಳು ಗೊತ್ತಿಲ್ಲ ಆದ ಕಾರಣ ನಾನು ವಾದಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಆದರೆ ಈ ದಾವೆಯಲ್ಲಿ ಅವರ ಪರವಾಗಿ ಸಾಕ್ಷಿ ಹೇಳಲು ಕರೆಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಯಾರು ಕರೆದಿಲ್ಲ ಆದರೆ ನಾನು ವಾದಿಯ ಆಪ್ತ ಸಹಾಯಕನಾಗಿದ್ದರಿಂದ ನಾನು ಈ ದಾವೆಯನ್ನು ನೋಡಿಕೊಳ್ಳುತ್ತಿದ್ದೇನೆ ಆದ ಕಾರಣ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದು ಹೇಳುತ್ತಾರೆ. ವಾದಿ ಈ ದಾವೆಯನ್ನು ನಡೆಸಬೇಕೆಂದು ನನಗೆ ಅಧಿಕಾರ ಪತ್ರ ಕೊಟ್ಟಿರುವುದಿಲ್ಲ. ನಾನು ವಾದಿಯ ಆಪ್ತ ಸಹಾಯಕನಾಗಿ ಸಾಕ್ಷಿ ಹೇಳಲು ಈ ನ್ಯಾಯಾಲಯಕ್ಕೆ ಬಂದಿರುತ್ತೇನೆ.

5. 2018 ರಿಂದ ನನಗೆ ಪ್ರತಿವಾದಿಗಳ ಪರಿಚಯವಿರುತ್ತದೆ. 2018 ರ ಮೊದಲು ಕ್ರಯದ ಕರಾರು ಪತ್ರದ ವಿಷಯಗಳನ್ನು ರೇಣುಗೋಪಾಲ್ ರವರು ಈ ದಾವೆಯನ್ನು ನೋಡಿಕೊಳ್ಳುತ್ತಿದ್ದರು. ಕ್ರಯದ ಕರಾರು ಪತ್ರ ಮತ್ತು ಜಮೀನಿನ ವಿಷಯಗಳನ್ನು ನೋಡಿಕೊಳ್ಳುವಂತೆ ನನಗೆ ಯಾರು ಅಧಿಕಾರ ಪತ್ರ ಕೊಟ್ಟಿರುವುದಿಲ್ಲ. ನಾನು ವಾದಿಯ ಕಡೆ ಕೆಲಸ ಮಾಡುತ್ತಿದ್ದುದ್ದರಿಂದ ವಾದಿ ಹೇಳಿದ ಹಾಗೆ ನಾನು ಜಮೀನಿನ ವಿಷಯಗಳನ್ನು ನೋಡಿಕೊಳ್ಳುತ್ತಿದ್ದೇನೆ. ಈ ದಾವೆಯ ಬಗ್ಗೆ, ದಾವಾ ಆಸ್ತಿಯ ಬಗ್ಗೆ ಮತ್ತು ಕ್ರಯದ ಕರಾರು ಪತ್ರದ ಬಗ್ಗೆ ಉಸ್ತುವಾರಿಯನ್ನು ಮೊದಲಿನಿಂದಲೂ ಈ ದಿನದವರೆಗೆ ನಾನೇ ನೋಡಿಕೊಳ್ಳುತ್ತಿದ್ದೇನೆಂದರೆ 2018 ರಿಂದ ನಾನು ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳುತ್ತಾರೆ. 2018 ರ

ಮೊದಲಿನ ದಾವಾ ಆಸ್ತಿಯ ಕ್ರಯದ ಕರಾರು ಪತ್ರದ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಜಿ ಪಿ ಎ ಬಗ್ಗೆ ನನಗೆ ಗೊತ್ತಿರುತ್ತದೆ ಎಂದು ಹೇಳುತ್ತಾರೆ. 2018 ರ ಮೊದಲು ಏನು ಆಗಿರುತ್ತದೆ ನನಗೆ ಗೊತ್ತಿಲ್ಲ ಎಂದರೆ ಅಷ್ಟೊಂದು ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

6. ನಿಪಿ1 ಎಷ್ಟು ಗಂಟೆ ಮಾಡಿರುತ್ತಾರೆ ಎಂದರೆ ಆ ಸಮಯದಲ್ಲಿ ನಾನು ಇರಲಿಲ್ಲ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**